ಶ್ರೀ ಸಿ. ಬೈರೇಗೌಡ: ಮಾನ್ಯ ಮುಖ್ಯಮಂತ್ರಿಗಳೆ, ಮಂತ್ರಿಗಳ ಖಾತೆಗಳ್ಯಾವುವು ಎನ್ನುವ ನೋಟಿಫಿಕೇಷನ್ ಏನಿದೆ ಅದನ್ನು ಮೊದಲು ಎಲ್ಲಾ ಸಚಿವರಿಗೂ ಸರ್ವೆ ಮಾಡಲು ಕ್ರಮ ತೆಗೆದುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಮಂತ್ರಿಗಳು): ಮಾನ್ಯ ಸದಸ್ಯರಿಗೆ ಉತ್ತರವನ್ನು ನಾಳೆ ಒದಗಿಸಿ ಕೊಡುತ್ತೇನೆ.

ಗೊಂದಲ

ಅಧ್ಯಕ್ಷರು: ಈಗ ಉತ್ತರ ಸಿದ್ಧವಾಗಿಲ್ಲ. ಏನು ಮಾಡುವುದಕ್ಕಾಗುತ್ತದೆ? ನಾಳೆ ಉತ್ತರ ಒದಗಿಸಿಕೊಡುತ್ತಾರೆ ಬಿಡಿ.

ರಾಜ್ಯದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

(28) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ವಿಧಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಈ ತೆರಿಗೆ ವಿಚಾರದಲ್ಲಿ ಸಾರ್ವಜನಿಕರಿಂದ ಹಾಗೂ ಜನ ಪ್ರತಿನಿಧಿಗಳಿಂದ ಅಭಿಮತವನ್ನೇನಾದರೂ ಪಡೆಯಲಾಗಿದೆ.

ಇ) ಹಾಗಿದ್ದಲ್ಲಿ, ಈ ಅಭಿಮತಕ್ಕೆ ಮನ್ನಣೆ ನೀಡಿ ತೆರಿಗೆ ಅಂಶಗಳಲ್ಲಿ ಮಾರ್ಪಡು ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಹೌದು

ಆ) ಪಡೆಯಲಾಗಿದೆ.

ಇ) ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸ್ವಯಂ ಘೋಷಿತ ಆಸ್ತಿ ತೆರಿಗೆ ವಿಷಯದಲ್ಲಿ ಜನಾಭಿಪ್ರಾಯ ಪಡೆಯಲಾಗಿದ್ದು ಸರ್ಕಾರ ಅದನ್ನು ಪರಿಶೀಲಿಸಲಾಗುವುದೆಂದು ಉತ್ತರಿಸಿದ್ದಾರೆ. ಈ ವಿವಿಧ ವರ್ಗಗಳಿಂದ ಯಾವ್ಯಾವ ಅಂಶಗಳ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ನೀಡಿದ್ದಾರೆ, ಮತ್ತು ಸರ್ಕಾರ ಸಾರ್ವಜನಿಕರಿಗೆ ತೊಡಕಾಗಿರುವ ಯಾವ ಅಂಶಗಳನ್ನು ಮಾರ್ಪಾಡು ಮಾಡುವ ಪ್ರಕ್ರಿಯೆಯಲ್ಲಿದೆ ಎನ್ನುವ ವಿಷಯವನ್ನು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಸರ್ಕಾರ ಏನು ಸ್ವಯಂ ಘೋಷಿತ ಆಸ್ತಿ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತಂದಿದೆ ಇದರ ಬಗ್ಗೆ ರಾಜ್ಯದಲ್ಲೇ ಅಲ್ಲ ಇಡೀ ರಾಷ್ಟ್ರದಲ್ಲೇ ದೊಡ್ಡ ಪ್ರಶಂಸೆ ಬಂದಿದೆ. ಇದು ಮೊದಲನೇ ವರ್ಷ, ಸ್ವಲ್ಪ ಮಂಗಳೂರು, ದಕ್ಷಿಣಕನ್ನಡ, ಉತ್ತರ ಕನ್ನಡ ಈ ಭಾಗಗಳಲ್ಲಿ ವೇಕೆಂಟ್ ಲ್ಯಾಂಡ್‌ನ ಆಸ್ತಿ ತೆರಿಗೆ ಘೋಷಣೆ ಮಾಡುವ ವಿಚಾರದಲ್ಲಿ, ಮತ್ತು ಕೆಲವು ಶೈಕ್ಷಣಿಕ ಸಂಸ್ಥೆಗಳ ಆಸ್ತಿ ತೆರಿಗೆ ಘೋಷಣೆ ಮಾಡುವ ವಿಚಾರದಲ್ಲಿ ಸ್ವಲ್ಪ ತೊಡಕು ಬಂದಿದೆ. ಇದರ ಬಗ್ಗೆ ಆಳುವ ಹಾಗೂ ವಿರೋಧಪಕ್ಷದ ಅನೇಕ ಸದಸ್ಯರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ, ಈ ಸಲಹೆಯ ಮೇರೆಗೆ ನಾವು ಈಗಾಗಲೇ ಒಂದು ಕರಡನ್ನು ತಯಾರು ಮಾಡಿದ್ದೇವೆ. ಈ ವರ್ಷವೇ ಈ ಅಧಿವೇಶನದಲ್ಲಿ ಆ ಒಂದು ತಿದ್ದುಪಡಿಯನ್ನು ಮಂಡನೆ ಮಾಡಲಿದ್ದೇವೆ. ಸಾರ್ವಜನಿಕರ ಅಭಿಪ್ರಾಯದಂತೆ ಸಾರ್ವಜನಿಕರಿಗೆ ತೊಂದರೆ ಆಗಬಾರದೆಂಬುದೇ ಸರ್ಕಾರದ ಅಭಿಪ್ರಾಯವಾಗಿದೆ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಈ ತಿದ್ದುಪಡಿಯನ್ನು ಈ ಅಧಿವೇಶನದಲ್ಲಿ ಸಾಲ ತರುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಸ್ವಯಂ ಘೋಷಿತ ಆಸ್ತಿ ತೆರಿಗೆಯ ಬಗ್ಗೆ, ಇಡೀ ರಾಜ್ಯದ ನಗರ ಪ್ರದೇಶಗಳಲ್ಲಿ ಗೊಂದಲ ನಿರ್ಮಾಣವಾಗಿದೆ, ಈ ಬಗ್ಗೆ ಸರ್ಕಾರ ಸರಿಯಾದ ಮಾರ್ಗದರ್ಶನ ಮತ್ತು ಸ್ಪಷ್ಟೀಕರಣವನ್ನು ನೀಡುತ್ತಿಲ್ಲ. ಇದಕ್ಕೆ ಸಂಬಂಧಿಸಿದ ಮಂತ್ರಿಗಳು ಒಂದು ತಿಂಗಳ ಹಿಂದೆ ಜುಲೈ ಒಂದನೇ ತಾರೀಖಿನಿಂದ ಇಡೀ ರಾಜ್ಯದಲ್ಲಿ, ಎಲ್ಲಾ ನಗರಪ್ರದೇಶಗಳಲ್ಲಿ ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಅನುಷ್ಠಾನ ಮಾಡುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದರು. ಪ್ರತಿಪಕ್ಷದವರಾದ ನಾವು ಸರ್ಕಾರವನ್ನು ಒತ್ತಾಯ ಮಾಡುತ್ತಾ ಬಂದಿದ್ದೇವೆ. ಸಾಕಷ್ಟು ಈ ಬಗ್ಗೆ ಚರ್ಚೆಯಾಗಬೇಕು. ಹಲವಾರು ತಿದ್ದುಪಡಿಗಳನ್ನು ಈ ಕಾನೂನಿಗೆ ತರಬೇಕಾಗಿದೆ. ಆ ಒಂದು ಚರ್ಚೆ ಹಾಗೂ ತಿದ್ದುಪಡಿಯಾಗದೆ ವಿನಹ ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ವ್ಯವಸ್ಥೆಯನ್ನು ಅನುಷ್ಠಾನ ಮಾಡುವುದು ಬೇಡವೆನ್ನುವ ಒತ್ತಾಯವನ್ನು ನಾವು ಮಾಡುತ್ತಾ ಬಂದಿದ್ದೇವೆ. ಆದರೂ ಇನ್ನು ಗೊಂದಲ ಸೃಷ್ಟಿಯಾಗಿದೆ. ಅದಕ್ಕೋಸ್ಕರ, ಸರ್ಕಾರ, ಮಾನ್ಯ ಮಂತ್ರಿಗಳು ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗಿದೆ ಮತ್ತು ಜನಪ್ರತಿನಿಧಿಗಳ ಹಾಗೂ ಸಾರ್ವಜನಿಕರ ಅಹವಾಲುಗಳನ್ನು ಕೇಳಿಕೊಂಡು ಆಬಗ್ಗೆ ಈಸದನದಲ್ಲೇ ಚರ್ಚೆಗೆ ಅವಕಾಶ ಮಾಡಿಕೊಟ್ಟು ಆ ತಿದ್ದುಪಡಿ ಮಸೂದೆಯನ್ನು ಆದಷ್ಟು ಬೇಗನೆ ಮಂಡನೆ ಮಾಡಬೇಕು ಆ ಬಗ್ಗೆ ಚರ್ಚೆಯಾಗಿ ವೈಜ್ಞಾನಿಕವಾಗಿ ನಾಗರೀಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ವ್ಯವಸ್ಥೆ ಜಾರಿಯಾಗುವಂತಾಗಬೇಕು. ಅಲ್ಲಿಯವರೆಗೆ ಈ ಕಾನೂನು ಜಾರಿಯಾಗುವುದನ್ನು ತಡೆಹಿಡಿಯಬೇಕೆನ್ನುವ ಒತ್ತಾಯವನ್ನು ಇವತ್ತು ಸರ್ಕಾರಕ್ಕೆ ನಾನು ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು ಮತ್ತು ಇದರ ಬಗ್ಗೆ ವ್ಯಾಪಕವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಹಿಂದೆ ಒಂದು ಸಾರಿ ಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದರು, ಆದರಲ್ಲಿ ಏನೂ ತೀರ್ಮಾನವಾಗಿಲ್ಲ, ಕೇವಲ ಒಂದು ಸಭೆಯನ್ನು ಕರೆದು ನಾವೆಲ್ಲಾ ಕೂಡಿ ಎಲ್ಲರನ್ನೂ ಕನ್ಸಲ್ಟ್ ಮಾಡಿದ್ದೇವೆ ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದಾರೆ, ಇದು ಹೀಗಾಗಬಾರದು. ನಾಗರೀಕರಿಗೆ ಅನುಕೂಲವಾಗುವ ಕೆಲಸವಾಗಬೇಕು, ಅದಕ್ಕಾಗಿ ಸರ್ಕಾರ ಸ್ಪಷ್ಟೀಕರಣ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ಸ್ವಯಂ ಘೋಷಿತ ಆಸ್ತಿ ತೆರಿಗೆ ವ್ಯವಸ್ಥೆ ರಾಜ್ಯದಲ್ಲಿ ಈಗಾಗಲೇ ಜಾರಿಗೆ ಬಂದಿದೆ, ಜನರೆಲ್ಲಾ ಉತ್ಸಾಹದಿಂದ ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ತಾವೇನು ಗೊಂದಲವಿದೆಯೆಂದು ಹೇಳುತ್ತಿದ್ದೀರಿ, ಆ ಬಗ್ಗೆ ಇಲ್ಲಿ ಚರ್ಚೆ ಮಾಡಲು ಯಾವುದೇ ರೂಪದಲ್ಲಿ ತೆಗೆದುಕೊಂಡು ಬನ್ನಿ, ಚರ್ಚೆ ಮಾಡೋಣ, ನಿಮ್ಮ ಸಲಹೆ ಏನಿದೆ ಸಾರ್ವಜನಿಕ ಹಿತದೃಷ್ಟಿಯಿಂದ ಏನೇನು ತಿದ್ದುಪಡಿ ತರುವುದಕ್ಕೆ ಸಾಧ್ಯವಿದೆಯೋ ಅದನ್ನೆಲ್ಲಾ ತರಲು ಈ ಸರ್ಕಾರ ಸಿದ್ಧವಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮೊನ್ನೆ ಮೊನ್ನೆ ಪತ್ರಿಕೆಯಲ್ಲಿ ಇದನ್ನು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಷ್ಠಾನ ಮಾಡುವುದಿಲ್ಲವೆಂದು ಪತ್ರಿಕೆಯಲ್ಲಿ ಬಂತು, ಅದು ಚುನಾವಣಾ ಸಂದರ್ಭದಲ್ಲಿ ಬಂದಿದೆ. ತದನಂತರ ಹೊಸ ಮೇಯರ್‌ರವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ ಮುಖ್ಯಮಂತ್ರಿಗಳು, ಅದೇನೂ ಆಗುವುದಿಲ್ಲ ಸ್ವಯಂಘೋಷಿತ ಆಸ್ತಿ ತೆರಿಗೆ ಜುಲೈ ಒಂದರಿಂದ ಅನುಷ್ಠಾನವಾಗಲೇ ಬೇಕು ಎಂದು ಹೇಳಿದರೆನ್ನುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಇದರಈಗಿನ ಪರಿಸ್ಥಿತಿ ಏನು? ತಕ್ಷಣ ಇದನ್ನು ಮಂಗಳೂರಿನಲ್ಲಿ ಜಾರಿ ಮಾಡುತ್ತಿರೋ ಮಾಡುವುದಿಲ್ಲವೋ ಅಲ್ಲಿರುವ ಹೊಸ ಆಡಳಿತ ಮಂಡಳಿ ಜಾರಿ ಮಾಡುವುದಿಲ್ಲವೆಂದು ಹೇಳುತ್ತಿದೆ. ಸರ್ಕಾರ ಜಾರಿ ಮಾಡಬೇಕೆಂದು ಹೇಳುತ್ತಿದೆ, ಈ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕಾಗಿದೆ.

ಶ್ರೀ ಎ. ಸೋಮಣ್ಣ: ಸ್ವಯಂ ಘೋಷಿತ ಆಸ್ತಿ ತೆರಿಗೆಯ ಬಗ್ಗೆ ನಾವು ಚರ್ಚೆ ಮಾಡಿದಾಗ, ಇದೊಂದು ಉತ್ತಮವಾದ ಕೆಲಸವನ್ನು ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಪ್ರಾಯೋಗಿಕವಾಗಿ ಮಾಡಿದೆವು. ಅದನ್ನು ಇತರ ಮಹಾನಗರಪಾಲಿಕೆಗಳಿಗೆ ವಿಸ್ತರಣೆ ಮಾಡುವಾಗ, ಈ ಸ್ಲಾ ಬ್ ಸಿಸ್ಟಂ ಎಬಿಸಿ ಎಂದು ಈ ಜೋನ್ ಸಿಸ್ಟಂ ಅನ್ನು ಮಾಡಿದ್ದಾರೆ, ಕೆಲವು ಕಡೆ ಎಲ್ಲಿ ವ್ಯಾಲ್ಯುವೇಷನ್ ಜಾಸ್ತಿ ಇರುತ್ತದೆಯೋ ಅಂತಹ ಕಡೆ ಕೆಲವನ್ನು ಹೊರತುಪಡಿಸಿ, ಮತ್ತೆ ಕೆಲವು ಕಡೆ ಯಾವುದೋ ಒಂದು ಕಚೇರಿಯಲ್ಲಿ ಕುಳಿತುಕೊಂಡುಯದ್ವಾ ತದ್ವಾ ಕೆಲವೊಂದು ಗೊಂದಲಗಳನ್ನು ಸೃಷ್ಟಿ ಮಾಡಿದ್ದಾರೆ. ಸ್ವಯಂ ಘೋಷಿತ ಆಸ್ತಿ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರುವಾಗ ಬೆಂಗಳೂರು ನಗರದಲ್ಲಿ ಎಲ್ಲೋ ಒಂದು ಕಡೆ ಜನರಿಗೆ ತಿಳುವಳಿಕೆಯಾಗಿಲ್ಲ ಇದನ್ನು ಮಾಡುವುದರಿಂದ ಸಾರ್ವಜನಿಕರಿಗೆ ಎಷ್ಟು ಕಂದಾಯ ಕಟ್ಟಬಹುದು, ನಮ್ಮಲ್ಲಿ ಎಷ್ಟು ಆಸ್ತಿ ಇದೆ, ಅದೇಷ್ಟು ಬೆಲೆ ಬಾಳುತ್ತದೆ ಎನ್ನುವುದನ್ನು ತಿಳಿಯಲು ಅನುಕೂಲವಾಗುತ್ತದೆ. ಸಾರ್ಕರ ಬೇರೆ ನಗರ ಪಾಲಿಕೆಗಳಲ್ಲಲಿ ವಾಲ್ಯೂಯೇಷನ್ ಅನ್ನು ಸ್ಲಾಬ್ ಸಿಸ್ಟಂ ಮೇಲೆ....

ಅಧ್ಯಕ್ಷರು: ಚರ್ಚೆಯ ಸಮಯದಲ್ಲಿ ಈ ಸಲಹೆಗಳನ್ನೆಲ್ಲಾ ಹೇಳಿ ಈಗ ಮಂತ್ರಿಗಳಾದ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಉತ್ತರ ಹೇಳುವುದು.

ಗೊಂದಲ

ಶ್ರೀ ವಿಜಯಕುಮಾರ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ನಮ್ಮ ಮಿತ್ರರಾದ ಭಾರತೀಯ ಜನತಾಪಕ್ಷದವರು ತುಳಸಿ ಕಟ್ಟೆಗೂ ಟ್ಯಾಕ್ಸ್ ಬೀಳುತ್ತಿದೆ ಜಾಗ್ರತರಾಗಬೇಕು ಎಂದು ಬಹಳ ರಾಜರೋಷವಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಇದರಿಂದ ಅಲ್ಲಿ ಜನರಿಗೆ ಕನ್‌ಫ್ಯೂಷನ್ ಆಗಿದೆ. ತುಳಸೀಕಟ್ಟೆಗೂ ಟ್ಯಾಕ್ಸ್ ಬೀಳುತ್ತದೆ ಎಂದು ಭಾರತೀಯ ಜನತಾ ಪಕ್ಷದವರು ಅಲ್ಲಿ ಹೇಳುತ್ತಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಯ ಬಹುತೇಕ ಕಾಗದಗಳು ನನಗೆ ಬರುವುದರಿಂದ ನನಗೆ ತಿಳಿದ ಸ್ಪಷ್ಟೀಕರಣವನ್ನು ನಾನು ಕೊಡಬೇಕಾಗಿದೆ. ಅಲ್ಲಿ ಇವರು ಜನರನ್ನು ಗೊಂದಲದಲ್ಲಿ ಸಿಕ್ಕಿಹಾಕಿಸಿದ್ದಾರೆ. ತುಳಸೀ ಕಟ್ಟೆಗೂ ಟ್ಯಾಕ್ಸ್ ಬೀಳುತ್ತದೆ ಎಂದು ಭಾರತೀಯ ಜನತಾ ಪಕ್ಷದವರು ರಾಜಾರೋಷವಾಗಿ ಪೇಪರ್‌ಗಳಲ್ಲಿ ಕೊಟ್ಟಿದ್ದಾರೆ. ಆದ್ದರಿಂದ, ಇದರ ಬಗ್ಗೆ ನಾವು ಏನು ಹೇಳಿದ್ದೇವೆ ಎಂದರೆ, ಇದರ ಬಗ್ಗೆ ಜನರನ್ನು ಕನ್ಸ್‌ಲ್ಟೇಷನ್ ಮಾಡಿ, ಜನರಿಗೆ ಏನು ತೊಂದರೆ ಇದೆ ಅದನ್ನು ಅವರಿಗೆ ತಿಳಿಯಹೇಳಿ, ಇದರ ಬಗ್ಗೆ ಮತ್ತೆ ನಾವು ವಿಚಾರಿಸೋಣ ಎಂದು ಹೇಳಿದ್ದು ನಿಜ. ಆದ್ದರಿಂದ, ಇದಕ್ಕೆ ಸ್ವಲ್ಪ ಸಮಯಾವಕಾಶ ಕೊಟ್ಟರೆ, ಅದನ್ನು ನಾವು ಮತ್ತೊಮ್ಮೆ ಚರ್ಚೆ ಮಾಡಿ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಅದಕ್ಕೆ ನಾವು ಬದ್ಧರಾಗಿರುತ್ತೇವೆ ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎನ್. ಯೋಗಿಶ್ ಭಟ್: ನಮ್ಮಲ್ಲಿ ಬಂದಿರುವ ಕನ್‌ಫ್ಯೂಷನ್ ಏನೆಂದರೆ, ಸನ್ಮಾನ್ಯ ವಿಜಯಕುಮಾರ ಶೆಟ್ಟರ ನಾಯಕರಾಗಿರುವ ಕಾಂಗ್ರೆಸ್ ಪಕ್ಷದ ನಾಯಕರಾದ ಜನಾರ್ಧನ ಪೂಜಾರಿಯವರು, ಇದನ್ನು ಅನುಷ್ಠಾನಕ್ಕೆ ತರುವುದಿಲ್ಲ ಎಂದುಹೇಳಿದ್ದಾರೆ.

ಅಧ್ಯಕ್ಷರು: ದಯವಿಟ್ಟು ವೈಯಕ್ತಿಕ ಹೆಸರುಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಡಿ.

ಶ್ರೀ ಎನ್.ಯೋಗಿಶ್ ಭಟ್: ಅವರು ಈ ಪದ್ಧತಿಯನ್ನು ಅನುಷ್ಠಾನಕ್ಕೆ ತರುವುದಿಲ್ಲ ಎಂದು ಹೇಳಿದ ಆಧಾರದಲ್ಲಿ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದರಿಂದಾಗಿ, ಇದನ್ನು ಜಾರಿಗೆ ತರುತ್ತೀರೋ, ಇಲ್ಲವೋ ಎನ್ನುವ ಬಗ್ಗೆ ನಮಗೆ ಸಂಶಯ ಉಂಟಾಗಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ: ನಾವು ಹೇಳಿರಬಹುದು. ಆದರೆ, ತುಳಸೀಕಟ್ಟೆಗೂ ಟ್ಯಾಕ್ಸ್ ಬೀಳುತ್ತದೆ ಎಂದು ಜನರನ್ನು ನೀವು ಕನ್‌ಫ್ಯೂಷನ್ ಮಾಡಿದಿರಲ್ಲಾ ಇದಕ್ಕೆ ಯಾರು ಜವಾಬ್ದಾರರು?

ಶ್ರೀ ಎನ್.ಯೋಗಿಶ್ ಭಟ್: ಎ ಡಿ ಬಿ ಸಾಲಕ್ಕೂ ಸ್ವಯಂ ಆಸ್ತಿ ತೆರಿಗೆ ಘೋಷಣೆಗೂ ಸಂಬಂಧ ಕಲ್ಪಿಸಲಾಗಿದೆ. ಖಾಲಿ ಜಾಗದ ಮೇಲೆ ಬೀಳುವ ಈ ತೆರಿಗೆ ಪದ್ಧತಿಯನ್ನು ತಕ್ಷಣ ರದ್ದುಗೊಳಿಸಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಎ. ರಾಮದಾಸ್: ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆ ಬಗ್ಗೆ ಸಮಗ್ರವಾದಂಥ ಚರ್ಚೆಯಾಗಿದೆ. ಅದರ ಕೆಲವು ಅಂಶಗಳನ್ನು ನಾವೂ ಸ್ವಾಗತ ಮಾಡಿದ್ದೇವೆ. ದಯವಿಟ್ಟು ಮಂತ್ರಿಗಳು ಹೇಳಬೇಕು. ಈಗ ರಾಜ್ಯದಲ್ಲಿ ಹಿಂದೆ ಇದ್ದಂಥ ಫೀಸಬಲ್ ರೆಂಟಿನ ಆಧಾರದ ಮೇಲೆ ಟ್ಯಾಕ್ಸ್ ಹಾಕುವಂಥ ಪದ್ಧತಿ ಜಾರಿಯಲ್ಲಿದೆಯೇ ಅಥವಾ ಸ್ಯಾ ್ಯಂಪ್ ಆಕ್ಟ್‌ನ ಅಡಿಯಲ್ಲಿರುವಂಥ ಆಕ್ಟ್ ಜಾರಿಯಲ್ಲಿದೆಯೇ? ಕಾರಣವೇನೆಂದರೆ, ಈ ಆಕ್ಟ್‌ನ್ನು ಬೇರೆ ಬೇರೆ ನಗರಪಾಲಿಕೆಗಳು ಮತ್ತು ಪುರಸಭೆಗಳು ಅಡಾಪ್ಟ್ ಮಾಡಿಕೊಳ್ಳಬೇಕಾಗಿತ್ತು. ಆದರೆ ಕನ್‌ಫ್ಯೂಷನ್‌ನಲ್ಲಿ, ಯಾರೂ ಇದನ್ನು ಅಡಾಪ್ಟ್ ಮಾಡಿಲ್ಲ. ಹಿಂದಿನ ಆಕ್ಟ್ ಇದೆಯಾ ಅಥವಾ ಹೊಸ ಆಕ್ಟ್ ಇದೆಯಾ ಎಂದು ಯಾರಿಗೂ ಗೊತ್ತಿಲ್ಲ. ದಯವಿಟ್ಟು ಈ ಎರಡು ಅಂಶಗಳಿಗೆ ಉತ್ತರವನ್ನು ಹೇಳಬೇಕು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ: ಇತ್ತೀಚೆಗೆ ಇಡೀ ರಾಜ್ಯದಲ್ಲಿ ಈ ಮೌಲ್ಯಾಧಾರಿತ ಸ್ವಯಂ ಆಸ್ತಿ ಘೋಷಣೆ ತೆರಿಗೆ ಪದ್ಧತಿಯ ವಿರುದ್ಧ. ಅತ್ಯಂತ ದೊಡ್ಡ ಪ್ರಮಾಣದಲ್ಲಿ ಜನಾಂಧೋಲದ ಆಗಿದೆ. ಎಲ್ಲಾ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಪಕ್ಷಾತೀತವಾಗಿ ಇದರ ವಿರುದ್ಧ ಠರಾವು ಮಾಡಿದ್ದಾರೆ. ಆದ್ದರಿಂದ ಇದಕ್ಕೆ ಹೆಚ್ಚಿನ ಸಮಯ ಕೊಡಬೇಕು. ಬೀಸೋ ದೊಣ್ಣೆ ತಪ್ಪಿಸಿಕೊಳ್ಳಲು ಮಾನ್ಯ ಮಂತ್ರಿಗಳು ಈಗ ಉತ್ತರವನ್ನು ಹೇಳಲಿ. ಆದರೆ, ಇದಕ್ಕೆ ಪ್ರತ್ಯೇಕವಾದಂಥ ಚರ್ಚೆಗೆ ಅವಕಾಶ ಕೊಡಬೇಕು. ಸರ್ವಪಕ್ಷಗಳ ಸಭೆಯನ್ನು ಕರೆದು ಚರ್ಚೆ ಮಾಡಿ ಅದರಲ್ಲಿ ಬಂದಂಥ ಅಂಶಗಳ ಮೇಲೆ ಮತ್ತೆ ಸಾರ್ವಜನಿಕವಾಗಿ ಚರ್ಚೆಗೆ ಒಳಪಡಿಸಬೇಕು. ಈ ವಿಷಯದಲ್ಲಿ ಸಾರ್ಕರ ತರಾತುರಿ ಮಾಡದೇ, ಸ್ವಲ್ಪ ಸಮಯಾವಕಾಶವನ್ನು ಕೊಟ್ಟು ನಂತರ ಅನುಷ್ಠಾನಗೊಳಿಸುವುದಕ್ಕೆ ಮುಂದಾಗಬೇಕು.

ಶ್ರೀ ಎಂ.ಎಸ್. ಆತ್ಮಾನಂದ: ಮೇಲ್ಮನೆಯ ಸಭಾನಾಯಕರು, ಮೇಲ್ಮನೆಯ ಸದಸ್ಯರು ಮತ್ತು ಇಲ್ಲಿಯ ಸದಸ್ಯರುಗಳನ್ನೊಳಗೊಂಡ ಒಂದು ಸಮಾಲೋಚನೆ ಸಭೆ ಏರ್ಪಾಡಾಗಿತ್ತು. ಈ ಪದ್ಧತಿಯಲ್ಲಿ ತೊಡಕಾಗಿರುವಂಥ ಹಲವಾರು ಅಂಶಗಳನ್ನು ಸರ್ವಪಕ್ಷಗಳ ಸದಸ್ಯರು ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ, ಈ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ಮೊದಲು, ಪೂರ್ವಾಭಾವಿಯಾಗಿ ಒಂದು ಸಭೆಯನ್ನು ಕರೆದು, ಈ ಅಂಶಗಳಿಗೆ ಸಮಜಾಯಿಷಿಯನ್ನು ನೀಡಿ ನಂತರ ಸರ್ವಸಮ್ಮತವಾಗಿರತಕ್ಕಂಥ ತೆರಿಗೆ ಪದ್ಧತಿಯನ್ನು ಜಾರಿಗೆ ತರುತ್ತೇವೆ ಎನ್ನುವ ಆಶ್ವಾಸನೆಯನ್ನು ನೀಡಲಾಗಿತ್ತು. ಆ ಆಶ್ವಾಸನೆಯಂತೆ ಈಗ ಮತ್ತೊಮ್ಮೆ ಸಭೆ ಕರೆದು, ನಾವು ಎತ್ತಿರತಕ್ಕಂಥ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಅದನ್ನು ತೀರ್ಮಾನ ಮಾಡಬೇಕು ಎನ್ನುವ ವಿಚಾರವನ್ನು ನಾನು ತಮ್ಮ ಮೂಲಕ ಮಂತ್ರಿಗಳಿಗೆ ಹೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ: ಮಾನ್ಯ ಅಧ್ಯಕ್ಷರೇ, ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಗೆ ಎಲ್ಲರೂ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಹಿಂದೆ ಜನರಿಗೆ ಬಹಳ ಕಿರುಕುಳವಾಗುತ್ತಿತ್ತು, ಈ ಪದ್ಧತಿಯಿಂದ ಅದನ್ನು ತಪ್ಪಿಸಿದ್ದಾರೆ, ನಮ್ಮ ಆಸ್ತಿಗೆ ಎಷ್ಟು ತೆರಿಗೆ ಕಟ್ಟಬೇಕು ಎಂದು ನಾವೇ ಘೋಷಣೆ ಮಾಡುವುದಕ್ಕೆ ಅವಕಾಶವಿದೆ ಎಂದು ಸ್ವಾಗತ ಮಾಡಿದ್ದಾರೆ. ಪ್ರತಿಯೊಂದು ಏರಿಯಾಗಳಲ್ಲಿ ಎಷ್ಟೆಷ್ಟು ಬೆಲೆ ಇದೆ, ಎಷ್ಟು ಕಟ್ಟಬಹುದು ಎನ್ನುವ ಬಗ್ಗೆ ಜಿಲ್ಲಾಧಿಕಾರಿಗಳು ನೋಟೀಸ್ ಬೋರ್ಡ್‌ನಲ್ಲಿ ಹಾಕಿದ್ದಾರೆ. ಇದು ಹೊಸ ಯೋಜನೆ, ಇದು ಜಾರಿಗೆ ಬಂದು ಕೆಲವಾರು ತಿಂಗಳುಗಳು ಮಾತ್ರ ಆಗಿವೆ. ಈ ನಡುವೆ ಕೆಲವು ಕನ್‌ಫ್ಯೂಷನ್ ಬಗ್ಗೆ ವಿರೋಧ ಪಕ್ಷದ ಅನೇಕ ಸದಸ್ಯರುಗಳು, ಜನಪ್ರತಿನಿಧಿಗಳು, ಮುನಿಸಿಪಲ್ ಕೌನ್ಸಿಲರ್‌ಗಳು, ಕಾರ್ಪೋರೇಷನ್ ಕೌನ್ಸಿಲರ್‌ಗಳು ಅವರವರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಈ ಸದನದಲ್ಲೂ ಕೂಡ ನನ್ನ ಸಹೋದ್ಯೋಗಿಗಳು ಅನೇಕ ಅಭಿಪ್ರಾಯಗಳನ್ನು, ಸಲಹೆಗಳನ್ನು ಕೊಟ್ಟಿದ್ದಾರೆ. ಈಗಲೂ ಸಹ ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಈ ಸದನದಲ್ಲಿ ಕೊಡಲಿ. ಅಥವಾ ಈ ವಿಷಯದ ಬಗ್ಗೆ ಚರ್ಚಿಸಲು ಪ್ರತ್ಯೇಕ ಸಭೆ ಕರೆಯಬೇಕೆಂದು ಹೇಳಿದರು. ಸಭೆಯನ್ನು ಕರೆಯಲೂ ನಾವು ಸಿದ್ಧರಿದ್ದೇವೆ. ಆ ಸಭೆಯಲ್ಲಿ ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಕೊಡಲಿ. ಸರ್ಕಾರದಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ಸರಿಮಾಡಲು ಸರ್ಕಾರ ಸಿದ್ಧವಾಗಿದೆ. ಆದರೆ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಈ ಪದ್ಧತಿ ಈಗಾಗಲೇ ಕಾರ್ಯರೂಪದಲ್ಲಿದೆ. ಕೆಲವು ಕಡೆ ವೇಕೆಂಟ್

ಲ್ಯಾಂಡ್ ವಿಚಾರದಲ್ಲಿ ಕನ್‌ಫ್ಯೂಷನ್ ಉಂಟಾಗಿದೆ. ಮಂಗಳೂರಿನಲ್ಲಿಯೂ ಹಾಗೇ ಆಗಿದೆ. ಅಲ್ಲಿ ನಮ್ಮ ಪಕ್ಷದ ಕೆಲವು ಮುಖಂಡರುಗಳು, ಸದಸ್ಯರುಗಳು ಹೇಳಿಕೆಗಳನ್ನು ಕೊಟ್ಟಿರುವುದು ನಿಜ. ಅಲ್ಲಿ ಏನಾಗಿದೆ ಎಂದರೆ, ಹಳ್ಳಿ ಇದ್ದದ್ದು ಈಗ ಪಟ್ಟಣದಲ್ಲಿ ಸೇರಿಕೊಂಡಿದ್ದು, ಒಂದೊಂದು ಎಕರೆಯಲ್ಲಿ 3-4 ಕುಂಟೆಗಳಷ್ಟು ಜಾಗದಲ್ಲಿ ಮಾತ್ರ ಮನೆ ಇದ್ದು, ಉಳಿದ ವೇಕೆಂಟ್ ಲ್ಯಾಂಡ್‌ಗೂ ಅಷ್ಟೇ ತೆರಿಗೆಯನ್ನು ಕಟ್ಟಬೇಕೇ ಎನ್ನುವ ವಿಚಾರದಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದೆ. ಸರ್ಕಾರ ಅದನ್ನು ಮನಗಂಡಿದ್ದು, ಈಗಾಗಲೇ ಅದರ ಬಗ್ಗೆ ತಿದ್ದುಪಡಿಯನ್ನು ತರುತ್ತಿದೆ. ಆದ್ದರಿಂದ, ಖಂಡಿತವಾಗಿ, ಸಾರ್ವಜನಿಕರನ್ನು, ವಿರೋಧ ಪಕ್ಷದವರನ್ನು ಮತ್ತು ನಮ್ಮ ಪಕ್ಷದ ಮುಖಂಡರುಗಳು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಇದರ ಬಗ್ಗೆ ಏನಾದರೂ ತಿದ್ದುಪಡಿ ತರುವುದಿದ್ದರೆ ಈ ಸರ್ಕಾರ ತರುತ್ತದೆ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ತಿಳಿಸಲು ನಾನು ಇಚ್ಛಿಪಡುತ್ತೇನೆ.

ಮಾನ್ಯ ಸದಸ್ಯರು: ಅಲ್ಲಿಯವರೆಗೆ ಈ ಪದ್ಧತಿಯನ್ನು ಜಾರಿಗೆಕೊಡದೆ ಇರುತ್ತೀರಾ?

ಶ್ರೀ ಎ. ರಾಮದಾಸ್: ಹಳೆಯ ಸಿಸ್ಟಂ ಸರಿಯಿಲ್ಲ ಎಂದಮೇಲೆ ತಿದ್ದುಪಡಿ ತರುವವರೆಗೆ ಒಂದುತಿಂಗಳ ಮಟ್ಟಿಗಾದರೂ ಅದನ್ನು ನಿಲ್ಲಿಸಿ. ಇದರ ಬಗ್ಗೆ ಈ ಸದನದಲ್ಲಿ ಚೆರ್ಚೆ ಮಾಡಿ ಸಮಗ್ರವಾದಂಥ ಒಂದು ವಿಧೇಯಕವನ್ನು ತನ್ನಿ. ನ್ಯೂನ್ಯತೆ ಇದೆ ಎಂದು ನೀವೇ ಒಪ್ಪಿಕೊಂಡ ಮೇಲೆ, ತಿದ್ದುಪಡಿ ಮಾಡುವವರೆಗೆ ಅದನ್ನು ನಿಲ್ಲಿಸಿ.

ಶ್ರೀ ಡಿ.ಕೆ. ಶಿವಕುಮಾರ್: ಅದು ನ್ಯೂನತೆ ಅಲ್ಲ. ವೇಕೆಂಟ್ ಲ್ಯಾಂಡ್ ವಿಚಾರದಲ್ಲಿ ಒಂದುಕನ್‌ಫ್ಯೂಷನ್ ಇದೆ. ಇದನ್ನು ನಾವು ಕ್ಲಿಯರ್ ಮಾಡುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ: ದಯವಿಟ್ಟು ಅದನ್ನು ತಡೆಹಿಡಿಯಬೇಕು. ಏಕೆ ತರಾತುರಿಯಲ್ಲಿ ಮಾಡುತ್ತಿದ್ದೀರಿ?

-ಗೊಂದಲ-

ಶ್ರೀ ಜಗದೀಶ್ ಶೆಟ್ಟರ್: ಸೃಷ್ಟೀಕರಣ ಮಾಡುವವರೆಗೆ ಅಂದರೆ ಕನಿಷ್ಟ ಒಂದು ತಿಂಗಳವರೆಗೆ, ಅದರ ಅನುಷ್ಟಾನ ಮಾಡುವಂಥಾದ್ದನ್ನು ತಡೆಹಿಡಿಯಿರಿ. ಬಹಳ ಸಲಹೆಗಳು ಬಂದಿವೆ ಎಂದು ನೀವೇ ಹೇಳಿದಿರಿ. ಜನಪ್ರತಿನಿಧಿಗಳಿಂದ, ನಾಗರೀಕರಿಂದ, ನಗರಸಭೆಗಳಿಂದ ಎಲ್ಲ ಕಡೆಯಿಂದಲೂ ಅಹವಾಲುಗಳು ಬಂದಿವೆ, ಕೆಲವು ಸುಧಾರಣೆಗಳನ್ನು ಮಾಡಬೇಕು ಎನ್ನುವ ಒತ್ತಾಯ ಬಂದಿದೆ ಎಂದು ನೀವೇ ಹೇಳುತ್ತಿದ್ದೀರಿ. ಆದ್ದರಿಂದ ಈ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿ, ತಿದ್ದುಪಡಿಯಾಗುವವರೆಗೆ ಅದನ್ನು ತಡೆಹಿಡಿಯುವಂಥ ಕೆಲಸವಾಗಲಿ ಈಗ ಇದರಿಂದ ಬಹಳಷ್ಟು ತೊಂದರೆಯಾಗುತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್: ಈ ಪದ್ಧತಿ ಸರಿಯಾಗಿದೆ ಎಂದು ತೆರಿಗೆಯನ್ನು ಕಟ್ಟಲು ಜನ ಮುಂದೆ ಬರುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಎಷ್ಟೋ ಕಡೆಗಳಲ್ಲಿ ಇದರ ವಿರುದ್ಧ ಸತ್ಯಾಗ್ರಹ ಮಾಡಿದ್ದಾರೆ, ಬಂದ್ ಮಾಡಿದ್ದಾರೆ.

ಶ್ರೀ ಕೆ. ಎಶ್ವೇಶ್ವರ ಹೆಗಡೆ: ಅನೇಕ ನಗರಸಭೆ, ಪುರಸಭೆಗಳವರು ಇದನ್ನು ವಿರೋಧ ಮಾಡಿ ಠರಾವು ಮಾಡಿದ್ದಾರೆ.

ಶ್ರೀ ಎ.ರಾಮದಾಸ್: ಮೈಸೂರು ಮಹಾನಗರಪಾಲಿಕೆಯವರೂ ಇದನ್ನು ವಿರೋಧ ಮಾಡಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ: ತಮ್ಮ ಪಕ್ಷದ ಪ್ರಮುಖರೇ, ಇದು ಸರಿಯಲ್ಲ, ಇದನ್ನು ಅನುಷ್ಠಾನ ಮಾಡಬಾರದು ಎಂದು ಮಂಗಳೂರಿನಲ್ಲಿ ಹೇಳಿರುವುದನ್ನು ತಾವೂ ಕೂಡ ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್: ಅವರು ಸಾವಿರ ಹೇಳುತ್ತಾರೆ. ಮೇಯರ್ ಅವರು ಹೇಳುತ್ತಾರೆ ಅದಕ್ಕೆ ಆ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ: ಅನುಷ್ಠಾನ ಮಾಡುವುದನ್ನು ಈಗ ತಡೆಹಿಡಿಯುವುದಿಲ್ಲವೇ? ಮಂಗಳೂರಿನಲ್ಲಿ ಕೂಡ ಇದು ಅನುಷ್ಠಾನವಾಗಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್: ಇದು ಎಲ್ಲಾ ಕಡೆಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ.

ಅಧ್ಯಕ್ಷರು: ಈಗಾಗಲೇ ಪ್ರಶ್ನೋತ್ತರ ವೇಳೆಗಿಂತ ಹತ್ತು ನಿಮಿಷ ಹೆಚ್ಚಾಗಿದೆ. ಆದ್ದರಿಂದ, ಉಳಿದಿರುವಂಥ ಮುಂದಿನ ಮೂರು ಪ್ರಶ್ನೆಗಳನ್ನು ಈ ಅಧಿವೇಶನದಲ್ಲೇ ಎಷ್ಟು ಸಾಧ್ಯವೋ ಅಷ್ಟು ಈಗ ತೆಗೆದುಕೊಳ್ಳುತ್ತೇವೆ. ಅವು ಲ್ಯಾಪ್ಸ್ ಆಗುವುದಿಲ್ಲ. ಇಲ್ಲಿದೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೆ, ದಿ: 9-7-02 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಒಂದನೇ ಪಟ್ಟಿಯಲ್ಲಿರುವ 41 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ): ಕರ್ನಾಟಕ ವಿಧಾನಸಭೆ ಸನ್ಮಾನ್ಯ ಸಭಾಧ್ಯಕ್ಷರೆ, ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕಂಥ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.